# ನಮ್ಮಲ್ಲಿ ಬಹಳ ಜನ ಸಿದ್ಧಾರ್ಥರಿದ್ದಾರೆ!

ಜಗತ್ತಿನ ಸಾವು ನೋವುಗಳಿಗೆ ಪರಿಹಾರಗಳನ್ನು ಶೋಧಿಸಲು ಅಂದು ಸಿದ್ಧಾರ್ಥ ನಡುರಾತ್ರಿಯಲ್ಲಿ ಮನೆ ತೊರೆದು ತನ್ನ ಮನದ ಬಾಗಿಲನ್ನು ತೆರೆದುಕೊಂಡನು. ಅದುವರೆಗೂ ಮುಚ್ಚಿಕೊಂಡಿದ್ದ ಅವನ ಕಣ್ಣುಗಳು ನಿಚ್ಚಳವಾಗಿ ತೆರೆದುಕೊಂಡು ಬದುಕನ್ನು ಅದರ ಆಳ ವಿಸ್ತಾರಗಳಲ್ಲಿ ನೋಡತೊಡಗಿದವು. ಆಗ ಅವನಿಗೆ ಅದುವರೆಗೂ ಬದುಕಿದ್ದ ಕತ್ತಲ ಕೂಪವೆಂಥದ್ದು ಎಂದು ಅರ್ಥವಾಗತೊಡಗಿತು. ನಿಜವಾದ ಜಗತ್ತು ಮತ್ತು ಅದರ ನಿಗೂಢಗಳು ನಾಲ್ಕು ಗೋಡೆಯ ಒಳಗೆ ಅರ್ಥವಿಸಿಕೊಳ್ಳಲು ಅಸಾಧ್ಯವೆಂದು ತಿಳಿಯಿತು. ನಮ್ಮ ಬಹುತೇಕ ನೋವುಗಳು ವ್ಯಕ್ತಿ ಮೂಲಜನ್ಯವೆಂದು ಅನ್ನಿಸಿದರೂ ಅವಕ್ಕೆ ಸಾಮಾಜಿಕ ಮುಖವಿರುತ್ತದೆಯೆಂದೂ, ಅವುಗಳನ್ನು ನಿವಾರಿಸಿಕೊಳ್ಳಲು ಸಮಾಜದಲ್ಲೇ ಔಷಧ ಶೋಧಿಸಬೇಕೆಂದೂ ಅವನು ಕಂಡುಕೊಂಡ. ಅದರ ಜೊತೆಗೆ ಸಾಮಾಜಿಕಜನ್ಯವೆಂದು ತೋರುವ ಬಹುಪಾಲು ಸಮಸ್ಯೆಗಳಿಗೆ ವ್ಯಕ್ತಿಮೂಲವಾದ ಹೋರಾಟ ಮತ್ತು ಪರಿಶ್ರಮದಿಂದ ಪರಿಹಾರ ಸಾಧ್ಯವೆಂದು ಅವನು ಅರ್ಥಮಾಡಿಕೊಂಡ. ಅಂದರೆ ವ್ಯಕ್ತಿ ಮತ್ತು ಸಮಾಜ ಪರಸ್ಪರ ಅವಲಂಬಿಗಳು. ಒಂದರ ಸುಖದುಃಖಗಳು ಮತ್ತೊಂದರ ಉತ್ಪನ್ನಗಳಂತೆ ಮಾರ್ಪಡುತ್ತವೆ; ಒಂದು ಮತ್ತೊಂದನ್ನು ಬಿಂಬಿಸುತ್ತಲೋ ಅವಲಂಬಿಸುತ್ತಲೋ ಜೀವಿಸುತ್ತಿರುತ್ತವೆ. ಅಂದರೆ ಮನೆಯ ಒಳವರ್ತುಲ ಜಗತ್ತು ಆಗಲಾರದು. ಅದೇರೀತಿ ಹೊರ ಜಗತ್ತು ಅತ್ಯಂತ ಭಿನ್ನವೆಂದು ತೋರಿದರೂ ಅದು ಅನೇಕ ಮನೆಗಳ ಆಸಕ್ತಿ ಅಭಿವ್ಯಕ್ತಿಗಳ ರೂಪವೆಂದೇ ತಿಳಿಯಬೇಕು.

ಆದರೆ ಮನೆಯೆಂಬುದು ಸುಖವೆಂದೂ, ಹೊರಜಗತ್ತೆಂಬುದು ಸವಾಲುಗಳ ಪರಿಶ್ರಮಗಳ ಮಹಾಪೂರವೆಂದು ತಿಳಿದು ಅದರಿಂದ ಪಲಾಯನ ಮಾಡುವ ಪ್ರವೃತ್ತಿ ಬಹುಜನರಲ್ಲಿರುತ್ತದೆ. ಇದೊಂದು ಬಗೆಯ ಭ್ರಮೆಯ ತಿಳಿವಳಿಕೆ. ಈ ಭ್ರಮೆಯಲ್ಲಿದ್ದವನು ಶುದ್ಧೋದನ. ಆದುದರಿಂದಲೇ ಅವನು ತನ್ನ ಮಗ ಸಿದ್ಧಾರ್ಥ ರೋಗರುಜಿನ ಮುಂತಾದ ನೋವುಕಾರಕ ನಿಮಿತ್ತಗಳಿಂದ ದೂರವಿರಬೇಕೆಂದು ಅವನನ್ನು ಮನೆಯಲ್ಲೇ ಕೂಡಿಹಾಕಿದ, ಜೀವನದ ಕಟುವಾಸ್ತವ ಸತ್ಯಗಳು ಸಿದ್ಧಾರ್ಥನ ಗಮನಕ್ಕೆ ಬರಬಾರದೆಂದು ಶ್ರಮವಹಿಸಿದ. ಅದು ಅವನು ಮಾಡಿದ ತಪ್ಪು ತಿಳಿವಳಿಕೆಯೆಂಬುದು ಅವನಿಗೆ ಅರ್ಥವಾಗಿದ್ದೇ ಸಿದ್ಧಾರ್ಥ ಗೃಹ ತ್ಯಾಗಮಾಡಿ ಹೊರ ನಡೆದ ನಂತರವೇ. ಇಲ್ಲಿ ಶುದ್ಧೋದನ ನಮಗೆ ಜೀವನದ ಅನೇಕ ವ್ಯಂಗ್ಯಗಳಿಗೆ ಪ್ರತೀಕನಾಗುತ್ತಾನೆ. ಸತ್ಯವೆಂದರೆ ಏನೆಂಬುದು ತಿಳಿದೂ ಅದರಿಂದ ಬದುಕನ್ನು ಪಲಾಯನಗೈಯಲು ಯತ್ನಿಸುವುದು ವಿಫಲ ಪ್ರಯತ್ನವೆಂಬುದನ್ನು ಅರಿಯದ ಮನಸ್ಥಿತಿಗೆ ಅವನು ಸಂಕೇತವಾಗಿ ಅಂತ್ಯದಲ್ಲಿ ವಿಷಾದ ನಾಯಕನಂತೆ ತೋರುತ್ತಾನೆ. ಶುದ್ಧೋದನಿಗೆ ವಾಸ್ತವದ ಅರಿವುದ್ದೂ ಮಗನನ್ನು ಅದರಿಂದ ದೂರವಿಡಲು ಅವನು ಮಾಡಿದ ಪ್ರಯತ್ನವೇ ಮಗನನ್ನು ಕಳೆದುಕೊಳ್ಳಲು ಕಾರಣವಾಯ್ತೆಂಬುದು ನಮಗೆ ಈಗ ಮುಖ್ಯವಾಗಿ ಕಾಣುತ್ತದೆ. ಸಿದ್ಧಾರ್ಥ ಲೋಕ ಚಿಂತಕನೂ, ಅವನು ಆಂತರ್ಯದಲ್ಲಿ ಸಮಾಜಮುಖಿಯೂ ಆದ್ದರಿಂದ ಬದುಕಿನ ನೋವು ಕಷ್ಟಕಾರ್ಪಣ್ಯಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ಗೃಹ ತ್ಯಾಗಮಾಡಿ ಹೊರನಡೆದು, ತನ್ನ ಐಹಿಕ ಸಂಬಂಧಗಳನ್ನೆಲ್ಲವನ್ನೂ ಕಳೆದುಕೊಂಡು ಬುದ್ಧನಾದ. ಅವನಿಗೆ ಹೊರಜಗತ್ತು ಹೊಸ ಮನೆಯಾಯಿತು. ಆ ಜಗತ್ತಿನ ಎಲ್ಲಾ ಸಮಸ್ಯೆಗಳನ್ನು ಮತ್ತು ಅದರ ಸುತ್ತಲು ಆವರಿಸಿಕೊಂಡಿರುವ ನೋವುಗಳನ್ನು ಹೇಗೆ ಪರಿಹರಿಸಬೇಕೆಂಬುದರಲ್ಲೇ ತನ್ನ ಜೀವಿತದ ಕಾಲವನ್ನೆಲ್ಲ ಅವನು ಕಳೆದ. ಏಕೆಂದರೆ ಅವನು ಬುದ್ಧನಾಗಿದ್ದ, ನಿಜವಾದ ಅರ್ಥದಲ್ಲಿ ಅವನು ಬುದ್ಧನಾಗಿದ್ದ.

ಸಮಸ್ಯೆಯಿರುವುದೇ ಇಲ್ಲಿ. ನಮ್ಮ ಬಹುಪಾಲು ತಂದೆ ತಾಯಿಗಳು ಶುದ್ಧೋದನ ಪ್ರವೃತ್ತಿಯವರೇ ಆಗಿರುತ್ತಾರೆ. ತಮ್ಮ ಮಕ್ಕಳು ಕಷ್ಟವನ್ನೇ ಪಡಬಾರದು ಎಂದು ಶ್ರೀಮಂತಿಕೆಯ ಸುಪ್ಪತ್ತಿಗೆಯ ವರ್ತುಲದಲ್ಲಿ ಮಕ್ಕಳನ್ನು ಬೆಳೆಸುತ್ತಾರೆ. ಅದಕ್ಕಾಗಿ ಅವರು ಹೊರಜಗತ್ತಿನ ಸುಖವನ್ನು ಸೂರೆಮಾಡಿ ಅನೇಕ ಅನೈತಿಕ ಮಾರ್ಗಗಳಲ್ಲಿ ಸಂಪತ್ತನ್ನು ಸಂಗ್ರಹಿಸುತ್ತಾರೆ. ಸುಖವೆಂಬುದು ಮನೆಯ ನಾಲ್ಕು ಗೋಡೆಗಳ ನಡುವೆಯೇ ಸಾಧಿತವಾಗುತ್ತದೆಯೆಂಬ ಭ್ರಮೆಯಲ್ಲಿ ಮುಳುಗುತ್ತಾರೆ. ತಮ್ಮ ಮಕ್ಕಳು ಸದಾ 'ಸಿದ್ಧಾರ್ಥ'ರಾಗಿಯೇ ಉಳಿಯಬೇಕೆಂದು ಅದಕ್ಕಾಗಿ ಶ್ರಮಿಸುತ್ತಾರೆ. ಬದುಕಿನಲ್ಲಿ ತಂದೆ ತಾಯಿಗಳ ಹಂಬಲದ ಈ ಪರಿಯಿಂದ ಬಹುತೇಕ ಮಕ್ಕಳು 'ಬುದ್ಧ'ರಾಗುವ ಅವಕಾಶದಿಂದ ವಂಚಿತರಾಗಿ 'ಸಿದ್ಧಾರ್ಥ'ರಾಗಿಯೇ ಉಳಿದುಬಿಡುತ್ತಾರೆ. ಏಕೆಂದರೆ ಎಲ್ಲರಲ್ಲೂ ಬುದ್ಧತ್ವದ ಒತ್ತಡವಿರುವುದಿಲ್ಲ.

ನಾವು ಸದಾ ಈ ಜನಪದ ಸೂಕ್ತಿಯನ್ನು ನೆನಪಿಡಬೇಕು: 'ಬೀದಿ ಮಕ್ಕಳು ಬೆಳೆದೊ; ಕೋಣೆ ಮಕ್ಕಳು ಕೊಳೆತೊ.'

■ **ಶಿಕಾಕು**

## ಮಾತೇ ಮುತ್ತು

★ ತಪ್ಪು ಯಾರು ಮಾಡಿದರೂ ತಪ್ಪೇ. ಆದರೆ ಜಾಣರು ತಪ್ಪಿಸಿಕೊಳ್ಳುತ್ತಾರೆ, ದಡ್ಡರು ಸಿಕ್ಕಿಹಾಕಿಕೊಳ್ಳುತ್ತಾರೆ.

-ಅನುಭವಾಮೃತ

★ ಅತಿ ಬುದ್ಧಿವಂತಿಕೆ ಪ್ರದರ್ಶಿಸಲು ಹೊರಟವರು ಕೊನೆಗೊಮ್ಮೆ ಸೋಲೊಪ್ಪಿಕೊಳ್ಳಬೇಕಾಗುತ್ತದೆ. ಶೋಷಣೆಯ ಮಾರ್ಗ ಯಾವಾಗಲೂ ಅಪಾಯಕರ.

-ವೀರೇಂದ್ರ ಹೆಗ್ಗಡೆ

★ ನಾಶವಾಗುವ ಆಸೆಗಳನ್ನುಳ್ಳ ಜೀವಿಗಳು ಹಣದಿಂದ ಏನು ತಾನೇ ಮಾಡಿಯಾರು? ಯಾವುದಕ್ಕಾಗಿ ಹಣವನ್ನು ಬಯಸುವರೋ ಆ ಶರೀರವೇ ನಶ್ವರವಾದುದು!

-ಸುಭಾಷಿತ

★ ಮನುಷ್ಯನು ತನ್ನ ಹಣವನ್ನು ಧರ್ಮಕ್ಕೆ, ಕೀರ್ತಿಗೆ, ಅರ್ಥಕ್ಕೆ, ಕಾಮಕ್ಕೆ ಮತ್ತು ಸಜ್ಜನರಿಗೆ- ಹೀಗೆ ಐದು ವಿಧದಲ್ಲಿ ಖರ್ಚು ಮಾಡತಕ್ಕವನು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖ ಪಡುತ್ತಾನೆ.

-ಭಾಗವತ

★ ನಿಮ್ಮ ಸಹೋದರರ ಸಂಕಟ ಕಾಲದಲ್ಲಿ ಸಂತೋಷ ಪಡಬೇಡಿ. ದೇವರು ಇದನ್ನು ಒಪ್ಪುವುದಿಲ್ಲ. ದೇವರು ಸಂಕಟದಲ್ಲಿರುವ ವ್ಯಕ್ತಿಗೆ ಅನುಕಂಪ ತೋರಿಸಬಹುದು ಮತ್ತು ನಿಮ್ಮನ್ನು ಸಂಕಟದಲ್ಲಿ ಸಿಕ್ಕಿಸಬಹುದು.

-ಮಹಮ್ಮದ್ ಪೈಗಂಬರ್

★ ನೀವು ನಿಮ್ಮ ಸಹೋದರನ ಸಂತೋಷದಲ್ಲಿ ಭಾಗಿಯಾದರೆ ಅವರ ಸಂತೋಷ ಇನ್ನೂ ಹೆಚ್ಚಾಗುವುದು. ಹಾಗೆಯೇ ಅವರ ಕಷ್ಟ, ನೋವಿನಲ್ಲಿ ಭಾಗಿಯಾದರೆ, ಅವರ ಕಷ್ಟ ಮತ್ತು ನೋವು ಕಮ್ಮಿಯಾಗುವುದು.

-ಮದರ್ ತೆರೇಸಾ

★ ಆಹಾರ, ಬೆಚ್ಚನೆಯ ಆಶ್ರಯ, ನಿದ್ರೆ ಹಾಗೂ ಒಂದು ಪುಸ್ತಕ- ಸದ್ಯಕ್ಕೆ ನನಗೆ ಬೇಕಾದುದು ಇಷ್ಟೇ.

-ವಿಲಿಯಂ ಹ್ಯಾಸ್ಲಿಟ್

★ ಅತಿ ಕಡಿಮೆ ಯಾರಿಗೆ ಬೇಕೋ ಅವರು ದೇವರಿಗೆ ಅತಿ ಸಮೀಪ ಇರುತ್ತಾರೆ.

-ಸಾಕ್ರೆಟಿಸ್

★ ಒಂದು ನಯಾಪೈಸೆ ರೊಕ್ಕ ಇಲ್ಲದಿರುವ ಮನುಷ್ಯ ಬಡವನಲ್ಲ, ಆದರೆ ಕನಸುಗಳಿಲ್ಲದ ಮನುಷ್ಯ ಬಡವ.

-ಸ್ವಾಮಿ ವಿವೇಕಾನಂದ

★ ಯಾವಾಗಲೂ ಇತರರಿಗೆ ಆಶ್ರಯ ಕೊಡುತ್ತಾ ಬಾಳಿದವರಿಗೆ ಆಶ್ರಿತರು ದೂರವಾದರೆ ಆಶ್ರಯವೇ ತಪ್ಪಿದಂತಾಗುತ್ತದೆ.

-ಕುವೆಂಪು

★ ಸೈನ್ಯದ ಅಧಿಪತಿಯನ್ನು ಕೊಲ್ಲಬಹುದು. ಆದರೆ ಸಾಮಾನ್ಯನೊಬ್ಬನ ಆಸೆಯನ್ನು ಕೊಲ್ಲುವುದು ಸಾಧ್ಯವಿಲ್ಲ.

-ಡೇವಿಡ್

★ ನಮಗೆ ಸಿಕ್ಕಲಾರದ್ದನ್ನು ಅಪೇಕ್ಷಿಸುವುದಷ್ಟೇ ಅಲ್ಲದೆ ನಮಗೆ ಬೇಕಾಗಿಯೇ ಇಲ್ಲದ್ದನ್ನೂ ಅಪೇಕ್ಷಿಸುತ್ತೇವೆ.

-ಎರಿಕ್ ಹಾಪರ್

★ ನಕ್ಷತ್ರಗಳತ್ತ ನೋಡುವವನು ರಸ್ತೆಯಲ್ಲಿನ ಹಳ್ಳದಲ್ಲಿ ಬೀಳುವನು.

-ಅಲೆಕ್ಸಾಂಡರ್ ಸ್ಮಿತ್